


## ನಕ್ಕು ನಲಿಸಿತು

'ಮುಂದಿನ ಸರ್ಕಾರ..? "ಹಾಸ್ಯ ಸಂಚಿಕೆ (ಸುಧಾ 5 ಏಪ್ರಿಲ್) ಅತ್ಯುತ್ತಮ ಹಾಸ್ಯ ಲೇಖನಗಳಿಂದ ಓದುಗರನ್ನು ನಕ್ಕು ನಲಿಸಿತು. ಅದರಲ್ಲೂ 'ಕೋಟ ಸಾಹಿತಿಗಳ ಹಸೀ ಕಲಾಪ' (ಬಿ.ಎಂ. ಹನೀಫ್), 'ಅಯ್ಯೋ ವೀಸಾನೂ ಇದೆಯಾ' (ಎನ್. ರಾಮನಾಥ್), 'ಅರ್ಥ ಹೀಗೂ ಉಂಟು' (ದೇವಿದಾಸ ಸುವರ್ಣ) 'ಬರಲಿದೆ ಬಿಡುಗಡೆ ಆಗದ ಚಿತ್ರಗಳು' (ಪ್ರಕಾಶ್ ಶೆಟ್ಟಿ) ಮತ್ತು 'ಪಕೋಡಾ ಪಾಲಿಟಿಕ್ಸ್' (ತುರುವೇಕೆರೆ ಪ್ರಸಾದ್) ಲೇಖನಗಳು ಮನಸ್ಸನ್ನು ಮುದಗೊಳಿಸಿದವು.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಲಲಿತರಾವ್ ಬೆಂಗಳೂರು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ರಮ್ಯಾ ಬೆಳ್ಳಾವೆ ಉಡುಪಿ, ಕೆ.ಪಿ. ರಾಮಗುಂಡಿ ಬೈಲಹೊಂಗಲ, ಕೆ.ವಿ. ರಾಜಲಕ್ಷ್ಮಿ ಬೆಂಗಳೂರು, ಬಿ.ಎಲ್.ವೇಣು ಚಿತ್ರದುರ್ಗ, ಡಾ.ಮಲ್ಲಿಕಾರ್ಜುನ ಕುಂಬಾರ ಗಜೇಂದ್ರಗಢ, ಕೋಟ ಹೆಚ್.ಜನಾರ್ದನ ಹಂದೆ, ಮಧುರ ಸುಬ್ರಹ್ಮಣ್ಯ ಬೆಂಗಳೂರು, ಗಾಣಧಾಳು ರಾಮಣ್ಣ ಚಿತ್ರದುರ್ಗ, ಡಾ. ಅಂಬವ್ವ ಚಿಕಾಲಗುಡ್ಡ

## ಸಂಗ್ರಹಯೋಗ್ಯ ಸಂಚಿಕೆ

'ಕೋಟ ಸಾಹಿತಿಗಳ ಹಸೀ ಕಸಾಪ' (ಬಿ.ಎಂ.ಹನೀಫ್) 'ಕಾಮಿಡಿ ಚಿಕ್ಕಣ್ಣರವರ 'ಟೆನ್ತ್ ಕ್ಲಾಸ್ ಅಕ್ಕೋರು' (ಚ.ಹ. ರಘುನಾಥ್) ಹಾಸ್ಯ ಲೇಖನಗಳ ಜತೆಗೆ ಮಿನಿ ಕಥೆ ಅಲೆಮಾರಿ (ಹೊರೆಯಾಲ ದೊರೆಸ್ವಾಮಿ) ತೋಷರವರ 'ವಿಚಾರ ಲಹರಿ', 'ನಿಮ್ಮೊಡನೆ'ಯಲ್ಲಿ ರ್‍ಯಾಗಿಂಗ್ ಬಗ್ಗೆ ಲೇಖನಗಳು ಮನಸ್ಸಿಗೆ ಬಹಳ ಹಿಡಿಸಿದವು, ಸಂಗ್ರಹಯೋಗ್ಯ ಸಂಚಿಕೆ.

—ಅಕ್ಕಿಹೆಬ್ಬಾಳು ನಾಗರಾಜ್, ಮೈಸೂರು, ರವೀಂದ್ರನಾಥ ಶಿ ಯಡಹಳ್ಳಿ, ಕೊಹಿಮ ಬಸರಕೋಡು, ನಾರಾಯಣಯಾಜಿ ಶಿರಾಲಿ

## ನಗೆ ಬರಲಿಲ್ಲ

'ಕೋಟ ಸಾಹಿತಿಗಳ ಹಸೀ ಕಸಾಪ' ಬರಹ ಹಾಸ್ಯ ಲೇಖನವಲ್ಲ! ಅದು ನಿಜಕ್ಕೂ ಕಸಾಪ ವಾಸ್ತವಕ್ಕೆ ಹಿಡಿದ ಕನ್ನಡಿ! ಹೀಗಾಗಿ ನನಗೆ ನಗೆ ಬರಲಿಲ್ಲ, ವಿಷಾದವಾಯಿತು.

— ಹುರುಕಡ್ಲಿ ಶಿವಕುಮಾರ್ ಬಾಚಿಗೊಂಡನಹಳ್ಳಿ

## ರ್‍ಯಾಗಿಂಗ್ ಪಿಡುಗು

'ನಿಮ್ಮೊಡನೆ'ಯಲ್ಲಿ 'ರ್‍ಯಾಗಿಂಗ್; ಕಡಿವಾಣ ವಿಲ್ಲವೇ?' (ಸುಧಾ ಹೆಗಡೆ) ಬರಹ ಸಕಾಲಿಕ. ಹಲವಾರು ದಶಕಗಳಿಂದಲೂ ಈ ಪಿಡುಗು ಎಲ್ಲರನ್ನೂ ಕಾಡುತ್ತಿದೆ. ಇದು ಬರಿಯ ಸ್ನೇಹ ಬೆಳೆಸುವ ಹೊಸಬರಿಗೆ ಮನಸ್ಥೈರ್ಯ ತುಂಬಿಸುವ ರೀತಿಯಲ್ಲಿ ಇದ್ದರೆ ಸ್ವಾಗತಾರ್ಹ.

—ಶ್ರೀನಾಥ್ ಕೊನೇಟಿ, ಎಲ್.ಗಿರಿಜಾರಾಜ್ ಬೆಂಗಳೂರು

## ದಿನ ವೈಭವ

'ಸವಿ ಸವಿ ನೆನಪು' ಪುಟದಲ್ಲಿ (ರಾಜಶೇಖರ ಕದಂಬ) ನೆನಪು ಮಾಡಿಕೊಂಡ 'ಕುವೆಂಪು—ರಾಜ್ ಅಪೂರ್ವ ಸಂಗಮ' ಬರಹ ಅನರ್ಘ್ಯ ರತ್ನಗಳ ಮಿಲನ ಸಂಭ್ರಮ, ಆ ದಿನದ ವೈಭವವನ್ನು ದಾಖಲಿಸಿತು.

—ಎಚ್. ಆನಂದ್‌ಕುಮಾರ್ ಚಿತ್ರದುರ್ಗ

## ಬಂಗಾರಪ್ಪನವರ ಕಾಲದಲ್ಲಿ..

ಸವಿನೆನಪು ಲೇಖನದಲ್ಲಿ ಕುವೆಂಪು ಹಾಗೂ ರಾಜ್‌ಕುಮಾರ್ ಅವರಿಗೆ 'ಕರ್ನಾಟಕ ರತ್ನ' ಘೋಷಣೆ ಮಾಡಿದ ದಿನ ಜನವರಿ 13 1993 ಎಂದಿದೆ. ಆದರೆ ಅದು 1992 ಆಗಬೇಕಿದ್ದು, ಬಂಗಾರಪ್ಪ ಮುಖ್ಯಮಂತ್ರಿಯಾದಾಗ ಎಂಬ ನೆನಪು.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

ಹೌದು, ಅದು 1992 ಎಂದಾಗಬೇಕಿತ್ತು. —ಸಂ

## ಉದಯಪುರ ಪ್ರವಾಸ

'ಸರೋವರಗಳ ನಗರ ಉದಯಪುರ' (ಗೀತಾ ಕುಂದಾಪುರ) ಮಾಹಿತಿಪೂರ್ಣ. ಅಲ್ಲಿನ ಕೋಟೆಗಳು, ಉದ್ಯಾನವನಗಳು ಮತ್ತು ಸರೋವರಗಳ ಬಗ್ಗೆ ಓದಿ ಒಮ್ಮೆ ಹೋಗಿ ನೋಡೋಣ ಎನಿಸಿತು!

—ಎಸ್. ಚನ್ನಪ್ಪ, ಮೈಸೂರು, ಪಿ.ಜಯವಂತ ಪೈ ಕುಂದಾಪುರ, ರತ್ನಾಕರ ಹೆಗಡೆಕಟ್ಟೆ ಮೂಡಬಿದರೆ

## ನೆನಪುಗಳ ಸರಮಾಲೆ

ಪ್ರವಾಸ ಲೇಖನ ಹಳೆಯ ನೆನಪುಗಳನ್ನು ಹೊರತರುವಲ್ಲಿ ಯಶಸ್ವಿಯಾಯಿತು. 1973ರಲ್ಲಿ ವೈದ್ಯಮಿತ್ರ ಬಿ.ಟಿ. ತಾರ್ಕೋಳರವರ ಜೊತೆಯಲ್ಲಿ ಉದಯಪುರದಲ್ಲಿ ನಡೆದ ತಜ್ಞ ವೈದ್ಯರ ಸಮ್ಮೇಳನದಲ್ಲಿ ಭಾಗವಹಿಸುವುದರ ಜೊತೆಗೆ ಲೇಖನದಲ್ಲಿ ಪ್ರಸ್ತಾಪಿಸಿರುವ ಅನೇಕ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ಸೊಬಗನ್ನು ಆನಂದಿಸಿದ್ದೆ.

—ಡಾ. ಕೆ.ಕೆ. ಜಯಚಂದ್ರಗುಪ್ತ ಹಾಸನ

## ಕಥೆ ಮನಮುಟ್ಟುವಂತಿದೆ

ಕಥೆ 'ಗಡವ ಬೆಕ್ಕು' (ಸಿ.ಟಿ. ಶಾಂತರಾಜು) ಮನ ಮುಟ್ಟುವಂತಿದೆ. ಹೊರೆಯಾಲ ದೊರೆಸ್ವಾಮಿ ಅವರ ಸಣ್ಣಕಥೆ 'ಅಲೆಮಾರಿ' ಚೆನ್ನಾಗಿದೆ.

—ಹೆಚ್.ಎಸ್. ಸತ್ಯನಾರಾಯಣ ರಾವ್, ಅರಕಲವಾಡಿ, ಚಾಮರಾಜನಗರ, ಸುಂದರ್ ಬೆಂಗಳೂರು

## ವಂಡರ್ ಪುಟ

'ಪುಸ್ತಕಗಳ ಹೋಟೆಲ್' (ವಿದ್ಯಾ ವಿ. ಹಾಲಭಾವಿ) ಪೋರ್ಚುಗಲ್ಲಿನ ಬಬಿಡೋಸ್ ಎಂಬ ಹಳ್ಳಿಯಲ್ಲಿ 50,000ಕ್ಕೂ ಮಿಕ್ಕಿ ಪುಸ್ತಕಗಳ ಸಂಗ್ರಹ ವಿರುವ ದಿ ಲಿಟರರಿ ಮ್ಯಾನ್ ಹೋಟೆಲ್ ಇದೆ ಎಂದು ಓದಿ ಆಶ್ಚರ್ಯ, ಕುತೂಹಲ ಆಯ್ತು.

—ರಾಜಶೇಖರ ಹಾದಿಮನಿ ಧಾರವಾಡ

## ಕೃತಿಗಳ ಆಹ್ವಾನ

ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಅಮರಮ್ಮ ಚೆನ್ನಬಸಪ್ಪ ಬೆಟ್ಟದೂರು ಪ್ರತಿಷ್ಠಾನವು ವಚನ ಸಾಹಿತ್ಯ ಹಾಗೂ ವೈಚಾರಿಕ ಸಾಹಿತ್ಯಗಳಿಗೆ ನೀಡುವ ಪ್ರಶಸ್ತಿಗಾಗಿ 2016ರ ಕೃತಿಗಳನ್ನು ಆಹ್ವಾನಿಸಿದೆ. ಲೇಖಕರು ತಮ್ಮ ಕೃತಿಗಳ ಮೂರು ಪ್ರತಿಗಳನ್ನು ಅಲ್ಲಮಪ್ರಭು ಬೆಟ್ಟದೂರು, ಅಮರಚೇತನ, ಕಲ್ಯಾಣ ನಗರ, ಕಿನ್ನಾಳ ರಸ್ತೆ, ಕೊಪ್ಪಳ—583231 ಇಲ್ಲಿಗೆ ಏಪ್ರಿಲ್ 24ರೊಳಗೆ ಕಳಿಸಿ.

ಮಾಹಿತಿಗೆ: 9844049205




